

# ನಗುವಿನ ದೋಣಿಯಲ್ಲಿ ಬದುಕಿನ ಬಣ್ಣ

ದರೋಡೆ ಮಾಡಲು ರೈಲಿಗೆ ನುಗ್ಗುವ ದರೋಡೆಕೋರರು ಮನುಷ್ಯನ ಅಂತರಂಗದ ಪಾತಳಿಗಳನ್ನು ಅನಾವರಣಗೊಳಿಸುವುದು ‘ಟ್ರೈಬ್ಸ್‘ ಕಿರುಚಿತ್ರದ ಕೇಂದ್ರ.

■ ಗೌರಿ

ಇದು ವಿಘಟನೆಯ ಕಾಲ. ಜಾತಿ, ಧರ್ಮ, ವರ್ಣಗಳಷ್ಟೇ ಅಲ್ಲ, ತಂತ್ರಜ್ಞಾನ, ವಲಸೆಯ ಅವಕಾಶ, ವೃತ್ತಿ ವೈವಿಧ್ಯಗಳೆಲ್ಲವೂ ಮೇಲ್ನೋಟಕ್ಕೆ ಮನುಷ್ಯರನ್ನು ಒಂದುಗೂಡಿಸುತ್ತಿರುವಂತೆ ಕಾಣಿಸುತ್ತಿದ್ದರೂ ಮತ್ತೊಂದು ರೀತಿಯಲ್ಲಿ ಮನುಷ್ಯನನ್ನು ವಿಘಟಿಸುತ್ತಲೇ ಬರುತ್ತಿವೆ. ಹೀಗಾಗಿ ಆಧುನಿಕ ಮನುಷ್ಯನ ಮನಸ್ಸು ಹಲವು ರೀತಿಗಳಲ್ಲಿ ಛಿದ್ರಗೊಳ್ಳುತ್ತಿದೆ. ಆದರೆ ಈ ಎಲ್ಲ ವ್ಯತ್ಯಾಸಗಳಾಚೆಗೆ ನಾವೆಲ್ಲರೂ ಮನುಷ್ಯರು ಅನ್ನುವ ಸತ್ಯವನ್ನು ಮರೆಯುತ್ತಿದ್ದೇವೆ.

ಇದು ನಿಜವಾಗಲೂ ಇಂದಿನ ಗಂಭೀರ ಸಮಸ್ಯೆ. ಇದರ ಬಗೆಗೆ ಮಾತಾಡುವಾಗಲೂ ನಮ್ಮ ಧ್ವನಿಯಲ್ಲಿ ಅಸಹಜ ಗಾಂಭೀರ್ಯವೇ ತುಂಬಿಕೊಳ್ಳುತ್ತದೆ. ಆದರೆ ಇದನ್ನು ಹಾಸ್ಯದ ತಾಂಬೂಲದೊಟ್ಟಿಗೆ ಮೆಲ್ಲಲು ಸಾಧ್ಯವೇ? ನಗುನಗುಸುತ್ತಲೇ ಮಾನವೀಯ ಸತ್ಯವೊಂದನ್ನು ಕಾಣಿಸಲು ಸಾಧ್ಯವೇ? ಈ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ‘ಟ್ರೈಬ್ಸ್’ ಕಿರುಚಿತ್ರವಿದೆ.

ಒಂದು ಟ್ರೈನಿಗೆ ಮೂವರು ದರೋಡೆಕೋರರು ನುಗ್ಗುತ್ತಾರೆ. ಆ ಮೂವರಲ್ಲಿ ಒಬ್ಬ ಆಫ್ರಿಕಾ ಸಂಜಾತ ಅಮೆರಿಕನ್. ಇನ್ನೊಬ್ಬ ಅರಬ್ ಸಂಜಾತ ಅಮೆರಿಕನ್. ಮತ್ತೊಬ್ಬ ಅಮೆರಿಕದ ಬಿಳಿಯ. ಟ್ರೈನ್‌ನಲ್ಲಿದ್ದ ಜನರಿಗೆ ಗನ್ ತೋರಿಸಿ ಹೆದರಿಸಿ ಅವರ ಬಳಿ ಇರುವ ಎಲ್ಲವನ್ನೂ ದೋಚುವ ಯೋಜನೆ ಅವರದ್ದು.

ಟ್ರೈನ್ ಹೊರಟ ಕೂಡಲೇ ಮೂವರೂ ಕಣ್ಸನ್ನೆ ಮಾಡಿಕೊಂಡು ಗನ್ ಹೊರಗೆ ತೆಗೆಯುತ್ತಾರೆ. ಎಲ್ಲರಿಗೂ ಅವರ ಬಳಿ ಇದ್ದ ಆಭರಣ–ಹಣ ಒಪ್ಪಿಸುವಂತೆ ಬೆದರಿಕೆ ಹಾಕುತ್ತಾರೆ. ಮೂವರೂ ಒಂದೊಂದು ಕಡೆ ತೆರಳಿ ಎಲ್ಲರಿಂದ ದೋಚುವ ಕೆಲಸ ಮಾಡುತ್ತಿರುವಾಗಲೇ, ಆಫ್ರಿಕಾ ಸಂಜಾತ ಅಮೆರಿಕದ ಕಪ್ಪು ವರ್ಣೀಯನಿಗೆ ತನ್ನಂಥದೇ ಕಪ್ಪುವರ್ಣೀಯ ಹೆಣ್ಣುಮಕ್ಕಳು ಎದುರಾಗುತ್ತಾರೆ. ಆಗ ಅವನು ಅವರ ಬಳಿ ದೋಚದೆ ಬಿಟ್ಟುಬಿಡುತ್ತಾನೆ. ಅದನ್ನು ಗಮನಿಸುವ ಅರಬ್ ಸಂಜಾತ ಅಮೆರಿಕನ್ ತಕರಾರು ತೆಗೆಯುತ್ತಾನೆ. ಅವರಿಬ್ಬರ ಮಾತಿಗೆ ಬಿಳಿ ವರ್ಣೀಯನೂ ಆಕ್ಷೇಪ ವ್ಯಕ್ತಪಡಿಸುತ್ತಾನೆ. ದರೋಡೆಗೆ ಎಂದು ಬಂದವರು ತಾರತಮ್ಯದ ಬಗ್ಗೆ ಮಾತಾಡಲು ತೊಡಗುತ್ತಾರೆ.



**ಹೆಸರು:** ಟ್ರೈಬ್ಸ್
**ನಿರ್ದೇಶನ:** ನಿನೊ ಅಲ್ದಿ
**ನಿರ್ಮಾಣ:** ಫ್ಲಿಕ್ಸ್ ಸೀಡ್ ಪ್ರೊಡಕ್ಷನ್ಸ್, ಟೈಲರ್ ಕಟ್ ಫಿಲ್ಮ್ಸ್
**ಸಂಕಲನ:** ಮೈಕ್ ಬ್ರೇನ್, ಜೋರ್ಡನ್ ಟೈಲರ್ ರೈಟ್
**ತಾರಾಗಣ:** ಡೆಸ್ಟಾರ್ಮ್ ಪವರ್, ಆಡಮ್ ವಹೀದ್, ಜಾಕ್ ಹಂಟರ್, ಜಾಸನ್ ಸ್ಟರ್ಟ್,

ತಿಳಿ ಹಾಸ್ಯದ ದಾರಿಯಲ್ಲಿಯೇ ನಿರ್ದೇಶಕರು ಗಂಭೀರ ವಿಷಯವೊಂದನ್ನು ನೋಡುಗರ ಮನಸಲ್ಲಿ ಇಳಿಸುತ್ತ ಹೋಗುತ್ತಾರೆ. ಇದರಲ್ಲಿನ ಒಂದು ಸನ್ನಿವೇಶವಂತೂ ಏಕಕಾಲಕ್ಕೆ ಹಾಸ್ಯರಸವನ್ನೂ ಹುಟ್ಟಿಸುತ್ತ, ಮನುಷ್ಯನ ಬದುಕು ಎಷ್ಟೆಲ್ಲ ಸಂಗತಿಗಳಿಂದ ಕೂಡಿರುತ್ತವೆ; ಅವುಗಳನ್ನು ಪ್ರತ್ಯೇಕಿಸುವುದು ಎಂಥ ಹಾಸ್ಯಾಸ್ಪದ ಸಂಗತಿ ಎಂಬುದನ್ನು ಕಾಣಿಸುತ್ತದೆ. ಒಂದೊಂದು ಸಂಗತಿ ಹಿಡಿದುಕೊಂಡು ಆ ಜನರ ಗುಂಪನ್ನು ಅವರು ಪ್ರತ್ಯೇಕಿಸಲು ಯತ್ನಿಸುತ್ತಾರೆ. ಸಲಿಂಗಿಗಳೆಲ್ಲರೂ ಒಂದು ಕಡೆ ಹೋಗಿ, ಉಳಿದವರು ಇನ್ನೊಂದು ಕಡೆ ನಿಲ್ಲಿ ಎಂದು ಆಜ್ಞಾಪಿಸಿದರೆ ಎಲ್ಲರೂ ಒಂದೇ ಗುಂಪಿನಲ್ಲಿ ಕೂಡುತ್ತಾರೆ. ಪ್ರಶ್ನಿಸಿದರೆ, ‘ನಾನು ಸಲಿಂಗಿಯಲ್ಲ, ಆದರೆ ಸಲಿಂಗಿಗಳ ಬಗ್ಗೆ ನನಗೆ ಅನುಕಂಪವಿದೆ. ಅವರ ಹಕ್ಕುಗಳ ಬಗ್ಗೆ ಗೌರವವಿದೆ. ನಾನು ಅವರನ್ನು ಬೆಂಬಲಿಸುತ್ತೇನೆ‘ ಎಂದು ಓರ್ವ ವೃದ್ಧೆ ಹೇಳುತ್ತಾರೆ. ಹೀಗೆ ಒಂದೊಂದು ವಿಷಯ ಹಿಡಿದು ವಿಭಾಗಿಸಲು ಯತ್ನಿಸಿದಷ್ಟೂ ಅದು ಇನ್ನಷ್ಟು ಸಂಕೀರ್ಣವಾಗುತ್ತಲೇ ಹೋಗುತ್ತದೆ.

ಕೊನೆಯಲ್ಲಿ ಅವರಲ್ಲಿಯೇ ಒಬ್ಬ ಹೇಳುತ್ತಾನೆ: ‘ಇಲ್ಲ, ನಾನೀ ಕೆಲಸ ಮಾಡಲಾರೆ. ನಾವೆಲ್ಲರೂ ಬೇರೆ ಬೇರೆ ಎಂಬುದು ನಿಜವಿರಬಹುದು. ಆದರೆ ಯಾವುದೋ ಒಂದು ಬಗೆಯಲ್ಲಿ ನಾವೆಲ್ಲರೂ ಒಂದೇ. ಪರಸ್ಪರ ಅಂತರ್‌ಸಂಬಂಧ ಇರುವವರೇ ಅನಿಸುತ್ತಿದೆ. ಅವರನ್ನು ದೋಚುವುದೆಂದರೆ ನನ್ನನ್ನು ನಾನೇ ದೋಚಿಕೊಂಡಂತೆ ಅನಿಸುತ್ತಿದೆ‘ ಎನ್ನುತ್ತಾನೆ. ಅಲ್ಲಿಗೆ ಮೂವರಿಗೂ ಮನುಷ್ಯರೆಲ್ಲರೂ ಅಂತರಂಗದಲ್ಲಿ ಒಂದೇ ಎಂಬ ಅರಿವು ಮೂಡುತ್ತದೆ.

ಮೇಲ್ನೋಟಕ್ಕೆ ಇದು ಜನಪ್ರಿಯ ಮಾದರಿಯಲ್ಲಿ ಮಾನವೀಯ ಸಂದೇಶವನ್ನು ಸಾರುತ್ತಿರುವಂತೆ ಭಾಸವಾಗುವುದೇನೋ ನಿಜ. ಆದರೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ವರ್ಣಭೇದ, ಜಾತಿ, ಧರ್ಮ, ಬಡತನದ ಇವನ್ನೆಲ್ಲವನ್ನೂ ಅರ್ಥಮಾಡಿಕೊಳ್ಳಬೇಕು ಎಂದರೆ, ಅದು ನಮ್ಮ ನಡುವೆ ಇದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ‘ಎಲ್ಲರೂ ಒಂದೇ’ ಎಂದು ಹೇಳುವಾಗ ಸಮಾಜದಲ್ಲಿ ಶತಮಾನಗಳಿಂದ ಅನ್ಯಾಯವನ್ನೇ ಉಣ್ಣುತ್ತ ಬಂದವರನ್ನೂ, ನಿನ್ನೆ ಮೊನ್ನೆ ಅಂಗಡಿಯಲ್ಲಿ ಮೋಸಹೋದವನನ್ನೂ ಒಟ್ಟಿಗೇ ಕೂಡಿಸುವುದು ಖಂಡಿತ ಸರಿಯಲ್ಲ. ಈ ವ್ಯತ್ಯಾಸವೂ ನಮಗೆ ತಿಳಿದಿರಲೇಬೇಕು. ಆ ಕಾಣ್ಕೆ ಈ ಕಿರುಚಿತ್ರದಲ್ಲಿ ಇಲ್ಲ.

ಈ ಕಿರುಚಿತ್ರ ವೀಕ್ಷಣೆಗೆ bit.ly/38rUi39 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.